ಶೀಲಿಸಿ ಅವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿ ಕಡ್ಡಾಯವಾಗಿ ವಾಸಮಾಡಬೇಕೆಂದು ಹೇಳಿದರೆ ಏಕೆ ಆಗುವುದಿಲ್ಲ ?

ಶ್ರೀ ಬಿ. ರಾಚಯ್ಯ.— ವಿಲೇಜ್ ಆಕೌಂಟೆಂಟ್‌ಗಳಿಗೆ ಮತ್ತು ಶಿಕ್ಷಕರಿಗೆ ಊರಿನ ಹೊರಗಡೆಯಲ್ಲಿ ಮನೆ ಕಟ್ಟುತ್ತಾರೆ. ಹೀಗೆ ಕಟ್ಟಿಸಿದ ಮನೆಗಳಿಗೆ ಹಿಂದೆ ಶಿಕ್ಷಕರು ಬಾಡಿಗೆ ಜಾಸ್ತಿಯೆಂದು ಹೋಗಲಿಲ್ಲ. ಆದ್ದರಿಂದ ಈ ಯೋಜನೆಯನ್ನು ನಿಲ್ಲಿಸಲಾಯಿತು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರಿಗೆ ಮನೆಬಾಡಿಗೆಯೆಂದು ಈ ವರ್ಷದಿಂದ ಹದಿನೈದು ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದರಿಂದ ಅವರಿಗೆ ಸ್ವಲ್ಪಮಟ್ಟಿಗಾದರೂ ಸಮಾಧಾನವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಸಾಧ್ಯವಾದ ಮಟ್ಟಿಗೆ ಎನ್.ಆರ್.ಇ.ಪಿ.ಯಿಂದ ಮಾನ್ಯ ಸದಸ್ಯರು ಆಯಾಯ ತಾಲ್ಲೂಕಿನಲ್ಲಿ ಇಂತಹ ಒಂದು ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನಮಾಡಿದರೆ ನಮಗೂ ಸಹ ಸಹಾಯವಾಗುತ್ತದೆ ಎಂದು ನಾನು ತಿಳಿಸುತ್ತೇನೆ.

ಶ್ರೀ ಬಸವರಾಜ ಹೆಚ್. ಪಾಟೀಲ್.— ಎನ್.ಆರ್.ಇ.ಪಿ.ಯಿಂದ ಮಾಡುವುದಕ್ಕೆ ಮೊದಲು ಜನತಾ ಮನೆಗಳಲ್ಲಿ ಒಂದೆರಡು ಮನೆಗಳನ್ನು ಅವರಿಗೆ ವಿಾಸಲಾಗಿಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಆಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.— ಈಗ ಶಿಕ್ಷಕರಿಗೆ ಆರುನೂರು ರೂಪಾಯಿಗಳಿಗಿಂತ ಜಾಸ್ತಿ ಸಂಬಳ ಬರುತ್ತದೆ ಎಂದು ಕಾನೂನು ಮಂತ್ರಿಗಳು ಹೇಳಿದರು. ಜನತಾ ಮನೆಗಳನ್ನು ಕಟ್ಟುವ ಉದ್ದೇಶ ನಿರ್ಗತಿಕರಿಗೆ ಮನೆ ಇಲ್ಲದೇ ಇರತಕ್ಕಂಥವರ ಅನುಕೂಲಕ್ಕಾಗಿ. ಎನ್.ಆರ್.ಇ.ಪಿ.ಯಿಂದ ಮತ್ತು ಹುಡ್ಕೊ, ಸಹಕಾರ ಸಂಘಗಳ ಮುಖಾಂತರ ಆಯಾಯ ತಾಲ್ಲೂಕಿನಲ್ಲಿ ಇದನ್ನು ಮಾಡಿದರೆ ಸ್ವಲ್ಪಮಟ್ಟಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಪಿ. ತಿಪ್ಪಯ್ಯ.— ಸಂಬಂಧಪಟ್ಟ ಮಾನ್ಯ ಮಂತ್ರಿಗಳೂ ಇಲ್ಲಿದ್ದಾರೆ. ಸರ್ಕಾರದಿಂದಲೇ ಈ ಸೌಲಭ್ಯ ಒದಗಿಸಿಕೊಡಲು ಸಾಧ್ಯವಿಲ್ಲವೆ?

ವಿಷಯ : ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳು.

ಪ್ರ. ಸಂಖ್ಯೆ 701 (1701) ಶ್ರೀ ಆಪ್ಪಣ್ಣ ಹೆಗ್ಡೆ (ಬೈಂದೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದ ವಿವಿಧ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು 1984-85ರ ಶೈಕ್ಷಣಿಕ ವರ್ಷದ ಆರಂಭದೊಳಗಾದರೂ ಭರ್ತಿಮಾಡಲಾಗುವುದೆ ;

(ಆ) ಪ್ರೌಢಶಾಲೆಗಳು ಮತ್ತು ಕಿರಿಯ ಹಾಗೂ ಹಿರಿಯ ವಿದ್ಯಾಲಯಗಳಲ್ಲಿಯೂ ಸಹ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಲಾಗುವುದೇ ;

(ಇ) ಸಾರ್ವಜನಿಕ ಶಿಕ್ಷಣ ಯೋಜನೆ ಮೇರೆಗೆ ಪ್ರಾರಂಭಿಸಲಾದ ಶಾಲೆಗಳಿಗೆ ಶಿಕ್ಷಕರನ್ನು ಕೂಡಲೇ ನೇಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—
(ಅ) ಹೊಸ ನೇಮಕಾತಿ ನಿಯಮಾವಳಿಗಳ ರಚನೆಯ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು ಶೀಘ್ರವೇ ಎಲ್ಲಾ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.
(ಆ) ಹೌದು.
(ಇ) ಹೌದು.

ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳು.

ಪ್ರ. ಸಂಖ್ಯೆ 702 (1671) ಶ್ರೀ ಶ್ರೀಪಾದ ಹೆಗಡೆ ಕಡಪೆ (ಅಂಕೋಲಾ).— ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಇವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡಬೇಕಾಗಿದೆ) ;

(ಆ) ಸದರಿ ಶಾಲೆಗಳಲ್ಲಿ ಇರಬೇಕಾದ ಶಿಕ್ಷಕರ ಸಂಖ್ಯೆ ಎಷ್ಟು ಮತ್ತು ಕೊರತೆ ಎಷ್ಟು (ತಾಲ್ಲೂಕುವಾರು ವಿವರ ಬೇಕಾಗಿದೆ) ;

ಮಾನ್ಯ ಸದಸ್ಯರು ಹಾಜರಿರಲಿಲ್ಲ